ಸಾಕ್ಷಿಯನ್ನು ದಿ: 24.10.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ–3

**ಪಾಟೀಸವಾಲುಃ– 4 ನೇ ಪ್ರತಿವಾದಿ ಪರ ವಕೀಲರಿಂದ:–**

1. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ನನಗೆ ಗೊತ್ತಿಲ್ಲ. ವಾದಿಯರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ದಾವಾ ಆಸ್ತಿಗಳು ಮೂಲತಃ ಲಿಂಗಶೆಟ್ಟಿಗೆ ಸೇರಿದ ಆಸ್ತಿಗಳಾಗಿರುತ್ತವೆ. ಈ ದಾವೆಯನ್ನು ಲಿಂಗಶೆಟ್ಟಿಯ ಮಗ ಹಾಕಿರುತ್ತಾನೆ. ನನಗೆ ದಾವಾ ಆಸ್ತಿಗಳು ಸರ್ವೆ ನಂಬರ್ ಹಾಗೂ ಚೆಕ್ಕುಬಂದಿ ಗೊತ್ತಿಲ್ಲ. ಲಿಂಗಶೆಟ್ಟಿಗೆ ಒಬ್ಬ ಗಂಡು ಮಗ, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನಾವು ಮತ್ತು ವಾದಿ ಪ್ರತಿವಾದಿಯರು ಒಂದೇ ಜನಾಂಗದವರಾಗಿರುತ್ತೇವೆ. ನಾಗರಾಜುವಿಗೆ ಕುಡಿತದ ಚಟವಿತ್ತು ಎಂದು ತೋರೀಸಲು ಯಾವುದೇ ದಾಖಲಾತಿ ಇರುವುದಿಲ್ಲ. ನಾಗರಾಜುಗೆ 4 ಜನ ಮಕ್ಕಳಿರುತ್ತಾರೆ, ಅವರೆಲ್ಲರೂ ಈಗ ಮದುವೆಯಾಗಿರುತ್ತಾರೆ. ಸದರಿ 4 ಜನ ಮಕ್ಕಳ ಮದುವೆಯನ್ನು ನಾಗರಾಜು ಮಾಡಿರುತ್ತಾನೆ. ನಾಗರಾಜುಗೆ ದಾವಾ ಆಸ್ತಿಯಿಂದ ಯಾವುದೇ ಆದಾಯ ಇರಲಿಲ್ಲ. ನಾಗರಾಜು ತನ್ನ ಮಕ್ಕಳ ಮದುವೆಗಾಗಿ ಮಾಡಿದ ಸಾಲವನ್ನು ತೀರಿಸಲು ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದನು ಎಂದರೆ ಸರಿ. ವಾದಿಯರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾಗರಾಜು ದಾವಾ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿ 18 – 20 ವರ್ಷಗಳಾಗಿವೆ. ನಾಗರಾಜು 13 – 14 ವರ್ಷಗಳ ಹಿಂದೆ ಮರಣ ಹೊಂದಿರುತ್ತಾನೆ. ವಾದಿಯರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ